ತ) ತಾಲ್ಲೂಕಿನ ತಹಶೀಲ್ದಾರ್ ... ಸದಸ್ಯರು

ಳ) ಅಧಿಕಾರೇತರ ಸದಸ್ಯರು ... ಸದಸ್ಯರು

ಶ) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ... ಸದಸ್ಯ ಸಮಾವೇಶಕರು

ಮೇಲೆ ಸೂಚಿಸಿದ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ. ಎಫ್. ಎಫ್. ಡಿ. ೨೩೧ ಎಫ್. ಜಿ ಎಲ್ ೮೩, ದಿನಾಂಕ. ೭-೩-೮೭ರಲ್ಲಿ ರಚಿಸಲಾಗಿದೆ.

ಇ) ನೇಮಿಸಲಾಗುತ್ತಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಈಗಾಗಲೇ ಅಧಿಕಾರೇತರ ಸದಸ್ಯರ ನೇಮಕಾತಿಗೆ ಸೂಕ್ತ ಕ್ರಮ ತೆಗೆದು ಕೊಳ್ಳಲಾಗಿದೆ. ಮತ್ತು ಅವರ ನೇಮಕಾತಿ ಆದ ಕೂಡಲೇ ಎಲ್ಲಾ ಪ್ರಕರಣಗಳನ್ನು ತುರ್ತಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಖಾದಿ ಕಮೀಶನ್ ಆಫ್ ಇಂಡಿಯಾದಿಂದ ಬೆಂಗಳೂರು ಖಾದಿ ಕಮೀಶನ್‌ಗೆ ಬಂದ ಹಣದ ವಿವರ.

೨೯೦೦ ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲ ಹೊಂಗಲ) ಮಾನ್ಯ ಬಂದರು, ಖಾನಂಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಖಾದಿ ಕಮೀಶನ್ ಆಫ್ ಇಂಡಿಯಾದವರಿಂದ ಬೆಂಗಳೂರು ಕರ್ನಾಟಕ ಖಾದಿ ಸ್ಟೇಟ್ ಬೋರ್ಡಿಗೆ ಬಿಡುಗಡೆಯಾದ ಹಣ ಎಷ್ಟು (ವರ್ಷವಾರ ವಿವರ ನೀಡುವುದು)

ಆ) ಕರ್ನಾಟಕ ಖಾದಿ ಸ್ಟೇಟ್ ಬೋರ್ಡ್‌ನವರು ಆಯಾ ಸಾಲಿನಲ್ಲಿ ಖರ್ಚು ಮಾಡಿರುವ ಹಣ ಎಷ್ಟು ?

ಶ್ರೀ ಎಂ. ರಘುಪತಿ (ಬಂದರು, ಖಾನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು.--

ಅ) ವಿವರಗಳು ಈ ಕೆಳಕಂಡಂತೆ ಇವೆ.

ಖಾದಿ ಆಯೋಗದಿಂದ ಹಣ ಪಡೆದ ವಿವರ

ವರ್ಷ	ಸಾಲ (ರೂ ಲಕ್ಷಗಳಲ್ಲಿ)	ಅನುದಾನ (ರೂ. ಲಕ್ಷ
೧೯೮೫-೮೬	೧೯೮೬	೩೩.೫೧
೧೯೮೬ ೮೭	೪೧೬.೨೫	೩೦.೨೭
೧೯೮೭-೮೮ (ತಾತ್ಕಾಲಿಕ)	೩೪೪.೫೪	೧೫.೫೪
ಒಟ್ಟು ಮೊತ್ತ	೧೨೫೯.೪೧	೭೯.೩೨

ಆ) ವಿವರಗಳು ಈ ಕೆಳಕಂಡಂತೆ ಇವೆ.—

ಖಾದಿ ಮಂಡಲಿಯು ವಿತರಿಸಿದ ಹಣದ ವಿವರ

ವರ್ಷ	ಸಾಲ	ಅನುದಾನ
		(ಲಕ್ಷ ರೂ. ಗಳಲ್ಲಿ)
೧೯೮೫-೮೬	೪೯೮.೫೩	೩೩.೪೮
೧೯೮೬-೮೭	೩೫೪.೮೧	೨೯.೩೫
೧೯೮೭-೮೮	೨೯೪.೬೯	೧೨.೫೩
ಒಟ್ಟು ಮೊತ್ತ	೧೧೪೭.೨೩	೭೫.೩೬

ಚಿಕ್ಕಮಂಗಳೂರು ವಿಭಾಗದಲ್ಲಿ ಸಾರ್ವಜನಿಕರಿಗೆ ಸೌದೆಯನ್ನು ಸಮರ್ಪಕವಾಗಿ ಒದಗಿಸುವ ಕರಿತು

೧೯೭೫. ಶ್ರೀ ಬಿ ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಂಗಳೂರು ವಿಭಾಗದಲ್ಲಿ ಹಾಲಿ ಸೌದೆ ಡಿಪೋಗಳ ಸಂಖ್ಯೆ ಎಷ್ಟು ?

ಆ) ೧೯೮೫-೮೬, ೮೬-೮೭ ಮತ್ತು ೮೭-೮೮ನೇ ಸಾಲಿನಲ್ಲಿ ವಿವಿಧ ಸೌದೆ ಡಿಪೋಗಳಿಗೆ ಒದಗಿಸಲಾಗಿರುವ ಸೌದೆ ಪ್ರಮಾಣವೆಷ್ಟು ? (ಪ್ರತ್ಯೇಕ ವಿವರ ನೀಡುವುದು)

ಇ) ಸದರಿ ಸಾಲಿನಲ್ಲಿ ಸರ್ಕಾರ ಮಂಜೂರು ಮಾಡಿದ ಡಿಪೋಗಳಿಗೆ ಒದಗಿಸಲಾದ ಮಂಜೂರು ಪ್ರಮಾಣವೆಷ್ಟು ? ಈ ಬಾಬ್ತು ಸರ್ಕಾರಕ್ಕೆ ಜಮಾ ಆಗಿರುವ ಹಣವೆಷ್ಟು ?

ಈ) ಚಿಕ್ಕಮಗಳೂರು ವಿಭಾಗದಲ್ಲಿ ಸೌದೆಯನ್ನು ಸರಿಯಾಗಿ ಒದಗಿಸದಿರುವ ಬಗ್ಗೆ : ಸರ್ಕಾರಕ್ಕೆ ದೂರು ಬಂದಿದೆಯೇ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಕೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಸಚಿವರು).—

ಅ) ಚಿಕ್ಕಮಗಳೂರು ವಿಭಾಗದಲ್ಲಿ ಇಲಾಖೆಯಿಂದ ನಡೆಸುತ್ತಿರುವ ೫೫ ಡಿಪೋಗಳು ಮತ್ತು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದವರು ನಡೆಸುತ್ತಿರುವ ೩ ಡಿಪೋಗಳು ಒಟ್ಟು ೮ ಸೌದೆ ಡಿಪೋಗಳು ಇವೆ.

ಆ) ವಿವರ ಈ ಕೆಳಗಿನಂತೆ ಇದೆ